**ಸಾಕ್ಷಿಯನ್ನು ಸತ್ಯ ಪ್ರತಿಜ್ಞೆಯ ಮೇರೆಗೆ ಇಂದು ದಿನಾಂಕ:25.02.2026 ರಂದು ಪ್ರಮಾಣೀಕರಿಸಲಾಯಿತು.**

**ಮುಂದುವರಿದ ಪಾಟೀ ಸವಾಲು: ಪ್ರತಿವಾದಿಗಳ ಪರ ಶ್ರೀ ಎಸ್ ಜೆ ವಕೀಲರಿಂದ:**

ನಾನು ಹಾಜರು ಪಡಿಸಿರುವ ನಿ ಪಿ 22 ರ ದಾಖಲೆ ಭೂಮಿಯ ಆಕಾರವನ್ನು ತಿಳಿಸುತ್ತದೆ ಎಂದರೆ ಸರಿ. ಸದರಿ ದಾಖಲೆಗಳನ್ನು ನಾನು ಸ.ನಂ.62 ರ ಸ್ವತ್ತು 4 ಪೋಡುಗಳಾಗಿರುತ್ತದೆ ಎಂದು ತೋರಿಸಲು ಹಾಜರು ಮಾಡಿದ್ದೇನೆ. ನಾನು ಈ ದಾವೆಯನ್ನು ನಿವೇಶನಕ್ಕಾಗಿ ಹೂಡಿರುತ್ತೇನೆ ಎಂದರೆ ಸರಿ. ಸದರಿ ನಿವೇಶನವು ಸ.ನಂ.62/1 ರ ಒಳಗಡೆ ಬರುತ್ತದೆ. ಸ,ನಂ.62/1 ರಲ್ಲಿ 4 ಎಕರೆ 18 ಗುಂಟೆಯನ್ನು ಸರ್ಕಾರ ಭೂಸ್ವಾಧೀನ ಮಾಡಿಕೊಂಡು ಅದರಲ್ಲಿ ನಿವೇಶನಗಳನ್ನು ನಿರ್ಮಿಸಿ ನಮಗೆ ನಿವೇಶನವನ್ನು ಮಂಜೂರು ಮಾಡಿ ಹಕ್ಕುಪತ್ರ ನೀಡಿರುತ್ತಾರೆ. ಸ.ನಂ.62/1 ರಲ್ಲಿ 1 ಎಕರೆ 17 ಗುಂಟೆ ಜಮೀನು ಇಮಾಮ್ ಷರೀಫ್ ಚೋಟೆ ಸಾಬ್ ಎನ್ನುವವರಿಗೆ ಸೇರಿದ್ದು ಅದನ್ನು ಅವರು ಸರ್ಕಾರಕ್ಕೆ ಬಿಟ್ಟುಕೊಟ್ಟಿರುತ್ತಾರೆ. ಸರ್ಕಾರವು ಇಮಾಮ್ ಷರೀಫ್ ರವರಿಂದ ಭೂಸ್ವಾಧೀನ ಮಾಡಿರುವುದನ್ನು ಗೆಜೆಟ್ ನೋಟಿಫಿಕೇಶನ್ ಮಾಡಲಾಗಿದೆ ಎಂದರೆ ಸರಿ. ಸದರಿ ಸ್ವತ್ತಿನಲ್ಲಿ ಸರ್ಕಾರವು ಒಟ್ಟು 33 ನಿವೇಶನಗಳನ್ನು ನಿರ್ಮಿಸಿರುತ್ತಾರೆ ಎಂದರೆ ಸರಿ. ಸ.ನಂ. 62/1 ರ ದಕ್ಷಿಣಕ್ಕೆ ಉಳಿಕೆ ಪೋಡುಗಳು ಇರುತ್ತವೆ ಎಂದರೆ ಸರಿಯಲ್ಲ, ಸಾಕ್ಷಿಯು ಪೂರ್ವಕ್ಕೆ ಬರುತ್ತದೆ ಎಂದು ನುಡಿಯುತ್ತಾರೆ. ನಾನು ಹೇಳುವಂತೆ ಸ.ನಂ.62/1 ರ ಉಳಿಕೆ ಜಮೀನು ಪೂರ್ವದ ಕಡೆ ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ಹಾಜರು ಪಡಿಸಿರುವ ನಿ ಪಿ 22 ರಲ್ಲಿ ಕಾಣುವ ರಸ್ತೆಯು ಮೈಸೂರು-ಬನ್ನೂರು ರಸ್ತೆ ಇರುತ್ತದೆ. ನಿ ಪಿ 22 ರಲ್ಲಿ ಸ.ನಂ.62/1 ರ ಉಳಿಕೆ ಜಮೀನು ಯಾವ ದಿಕ್ಕಿನಲ್ಲಿ ಇದೆ ಎಂದು ತೋರಿಸುತ್ತದೆ ಎಂದರೆ ಸರಿ. ಸದರಿ ದಾಖಲೆಯ ಪ್ರಕಾರ ಸ.ನಂ.62 ರ ಒಟ್ಟು ವಿಸ್ತೀರ್ಣ 5 ಎಕರೆ 17 ಗುಂಟೆ ಇರುತ್ತದೆ ಎಂದರೆ ಸರಿ. ನಿ ಪಿ 22 ಅನ್ನು ಯಾವ ವರ್ಷ ಮಾಡಲಾಗಿದೆ ಎಂದು ನನಗೆ ಹೇಳಲಾಗುವುದಿಲ್ಲ. 1968 ರಲ್ಲಿ ಅಳತೆ ಮಾಡಲಾದ ದಾಖಲೆ ಎಂದು ನಿ ಪಿ 23 ರಲ್ಲಿ ನಮೂದು ಇದೆ ಎಂದರೆ ಸಾಕ್ಷಿಯು ಇರಬಹುದು ಎಂದು ನುಡಿಯುತ್ತಾರೆ. ನಾನು ಹಾಜರು ಪಡಿಸಿರುವ ದಾಖಲೆಗಳಲ್ಲಿ ಹೆಸರು ಮತ್ತು ನಮೂದುಗಳು ಸ್ಪಷ್ಟವಾಗಿ ಕಾಣುತ್ತಿಲ್ಲ ಎಂದರೆ ಸರಿ. ಸ.ನಂ.62 ರ 4 ಪೋಡುಗಳು ತ್ರಿಭುಜ ಆಕಾರದಲ್ಲಿದೆ ಎಂದರೆ ಸರಿ. ಸ.ನಂ.62/2 ರ ಉತ್ತರಕ್ಕೆ ಡಾಂಬರು ರಸ್ತೆ ಇದೆ ಎಂದರೆ ಸರಿ. ಡಾಂಬರು ರಸ್ತೆಯ ದಕ್ಷಿಣಕ್ಕೆ ಇರುವ ಜಮೀನುಗಳು ಕೃಷಿ ಉಪಯೋಗಿ ಜಮೀನುಗಳು ಇರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ಸದರಿ ಜಮೀನು ಭೂಪರಿವರ್ತನಗೊಂಡು ಅಕ್ಕಿ ಗಿರಣಿ ಕಟ್ಟಿರುತ್ತಾರೆ ಎಂದು ನುಡಿಯುತ್ತಾರೆ.

ನಾನು ಹೇಳುವಂತೆ ಅಲ್ಲಿ ಯಾವುದೇ ಭೂಪರಿವರ್ತನೆ ಆಗಿರುವುದಿಲ್ಲ ಮತ್ತು ಅಕ್ಕಿ ಗಿರಣಿ ಕಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ರಸ್ತೆಯ ಪ್ರತಿವಾದಿಯ ಜಮೀನು ಇದೆ ಎಂದರೆ ಸರಿಯಲ್ಲ. ಅವರು ಸುತ್ತಲೂ ಕಲ್ಲುಕಂಬ ಹಾಕಿ ತಂತಿ ಬೇಲಿ ಹಾಕಿರುತ್ತಾರೆ ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿರುವ ಯಾವುದೇ ದಾಖಲೆಗಳು ಸ್ಪಷ್ಟವಾಗಿ ಕಾಣುತ್ತಿಲ್ಲ ಎಂದರೆ ಸರಿಯಲ್ಲ. ಈ ದಾವಾ ಆಸ್ತಿಗೂ ಮತ್ತು ನಾನು ಹಾಜರು ಪಡಿಸಿರುವ ದಾಖಲೆಗಳಿಗೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ಇಮಾಮ್ ಷರೀಫ್ ರವರ ಸ್ವತ್ತಿನಲ್ಲಾಗಿರುವ ನಿವೇಶನಗಳಿಗೂ ಮತ್ತು ನಾನು ಹಾಜರು ಪಡಿಸಿರುವ ದಾಖಲೆಗಳಿಗೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ಸರ್ಕಾರ ನನಗೆ ನಿವೇಶನ ಕೊಟ್ಟಿದ್ದರೂ ಸಹ ನಾನು ಪ್ರತಿವಾದಿಯ ಆಸ್ತಿಯನ್ನು ಲಪಟಾಯಿಸುವ ಉದ್ದೇಶದಿಂದ ಸುಳ್ಳು ದಾವೆ ಹೂಡಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸರ್ಕಾರವು ಪ್ರತಿವಾದಿಯ ಜಮೀನನ್ನು ಯಾವತ್ತೂ ಭೂಸ್ವಾಧೀನ ಮಾಡಿರುವುದಿಲ್ಲ ಎಂದರೆ ಸಾಕ್ಷಿಯು ಪ್ರತಿವಾದಿಗೆ ಅಲ್ಲಿ ಯಾವುದೇ ಇರದ ಕಾರಣ ಸರ್ಕಾರ ಭೂಸ್ವಾಧೀನ ಮಾಡುವ ಪ್ರಶ್ನೆ ಉದ್ಭವಿಸುವುದಿಲ್ಲ ಎಂದು ನುಡಿಯುತ್ತಾರೆ. ಪ್ರತಿವಾದಿಯ ಹೆಸರಿನಲ್ಲಿರುವ ದಾಖಲೆಗಳನ್ನು ರದ್ದುಗೊಳಿಸಲು ನಾನು ಯಾವುದೇ ದಾವೆ ಹೂಡಿರುವುದಿಲ್ಲ ಎಂದರೆ ಸಾಕ್ಷಿಯು ಅದಕ್ಕಾಗಿಯೇ ನಾನು ಈ ದಾವೆ ಹೂಡಿರುತ್ತೇನೆ. ಪ್ರತಿವಾದಿಯ ಜಮೀನನ್ನು ಲಪಟಾಯಿಸುವ ಉದ್ದೇಶದಿಂದ ಸುಳ್ಳು ದಾವೆ ಹೂಡಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓದಿ ಹೇಳಿ ಕೇಳಿ ಸರಿಯಾಗಿದೆ.

(ಸಚಿನ್ ಹೆಚ್.ಆರ್)
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ .ಎಂ .ಎಫ್ .ಸಿ ., ತಿ .ನರಸೀಪುರ .